




★ ಸಸಿತೋಟ

ಅಮೆರಿಕಾದ ಟೆಕ್ಸಾಸ್‌ನಲ್ಲಿ ಜಿಂಜರ್ ಬ್ರೆಡ್‌ನಲ್ಲಿ ನಿರ್ಮಿಸಲಾಗಿರುವ ಬೃಹತ್ ಮನೆಯಿದು. ಮರದ ಚೌಕಟ್ಟಿನ ಮೇಲೆ ತಿನ್ನಲು ಯೋಗ್ಯವಾದ 35.8 ದಶಲಕ್ಷ ಕ್ಯಾಲೊರಿ ಬ್ರೆಡ್‌ನಿಂದ ನಿರ್ಮಿಸಲಾಗಿರುವ ಈ ಮನೆ ಗಿನ್ನೆಸ್ ದಾಖಲೆ ಸೇರಿದೆ. ಆದರೆ ಮನೆಯನ್ನು ಕಾಯುವುದೇ ಕಷ್ಟವಾಗಿದೆಯಂತೆ. ಕಳ್ಳರಿಂದಲ್ಲ, ನೇರವಾಗೇ ದಾಳಿಗಿಳಿಯುವ ಜೇನುಹುಳುಗಳಿಂದ.

ಬ್ರಿಟನ್ನಿನ ರಾಣಿ ಎಲಿಜಬೆತ್ ಅರಮನೆಯಲ್ಲಿ ಗೋಡಂಬಿ, ಬಾದಾಮಿ ಕದ್ದು ತಿನ್ನುತ್ತಿದ್ದ ಭದ್ರತಾ ಪಡೆಯವರನ್ನು ಹಿಡಿಯಲು ಅನುಸರಿಸಿದ ಉಪಾಯವೊಂದು ಈಗ ಬಹಿರಂಗಗೊಂಡು ನಗೆಪಾಟಲಿಗೀಡಾಗಿದೆ. ರಾಣಿ ತಿನ್ನಲೆಂದು ಬಕಿಂಗ್‌ಹ್ಯಾಮ್ ಅರಮನೆಯಲ್ಲಿ ಅಲ್ಲಲ್ಲಿ ಬಾದಾಮಿ, ಗೋಡಂಬಿ, ಬಾಂಬೆ ಮಿಕ್ಸ್ ಇಡುತ್ತಿದ್ದರಂತೆ. ಭದ್ರತಾ ಪಡೆಯವರು ಅದನ್ನು ಬಾಯಿಗೆ ಹಾಕಿಕೊಳ್ಳುವುದನ್ನು ತಡೆಯಲು ರಾಣಿ ಆ ಬಾಟಲ್‌ಗಳ ಮೇಲೆ ಮಾರ್ಕ್ ಮಾಡಿ ಇಡುತ್ತಿದ್ದರಂತೆ. ರೂಪರ್ಟ್ ಮುರ್ಡೋಕ್ ಪತ್ರಿಕೆಯ ಪತ್ರಕರ್ತರಿಂದ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಕೋರ್ಟ್‌ನಲ್ಲಿ ಸಾಕ್ಷಿ ಹೇಳಿದ ವ್ಯಕ್ತಿ ಇದನ್ನು ಬಾಯಿಬಿಟ್ಟಿದ್ದಾನೆ.

ಬಯಕೆಗಳು ವಿಚಿತ್ರವಾಗಿರುತ್ತವಂತೆ. ಅಮೆರಿಕಾದ ಪೆನ್ಸಿಲ್ವೇನಿಯಾದಲ್ಲಿ ಹೊಸದಾಗಿ ಮದುವೆಯಾದ ಬಾರ್ಬರ್- ಮಿರಾಂಡಾ ಜೋಡಿಗೆ ವ್ಯಕ್ತಿಯೊಬ್ಬನನ್ನು ಇಬ್ಬರೂ ಸೇರಿ ಕೊಲೆ ಮಾಡುವ ಬಯಕೆಯಾಯ್ತಂತೆ. ಅದಕ್ಕಾಗಿ ಪುರುಷನೊಬ್ಬನನ್ನು ಡೇಟಿಂಗ್ ಮಾಡುವ ನೆಪದಲ್ಲಿ ಆಹ್ವಾನಿಸಿದಳು ಮಿರಾಂಡಾ. ಪತಿ ಹಗ್ಗದಿಂದ ಕುತ್ತಿಗೆ ಬಿಗಿದರೆ, ಮಿರಾಂಡಾ ಚೂರಿಯಿಂದ ಹತ್ತಾರು ಬಾರಿ ತಿವಿದಳಂತೆ. ಬಯಕೆ ತೀರಿದ ಮೇಲೆ ಇಬ್ಬರೂ ಸೆರೆಮನೆ ಸೇರಿದ್ದಾರೆ.



ಚೀನಾದ ಜಿಯಾವೊ ಕಾರ್ಖಾನೆಯಲ್ಲಿ ಅಪಘಾತವೊಂದರಲ್ಲಿ ಕೈ ಕಳೆದುಕೊಂಡ. ಕೈ ಕೊಳೆಯುವ ಮುನ್ನ ಅದನ್ನು ಕಾಲಿಗೆ ಜೋಡಿಸಿದರು. ಒಂದು ತಿಂಗಳಿಂದ ಕಾಲಲ್ಲಿ ಕೈ ಹಿಡಿದಿಟ್ಟುಕೊಂಡ ಜಿಯಾವೋಗೆ ಪುನಃ ಅದನ್ನು ಜೋಡಿಸಲಾಗಿದೆಯಂತೆ. ಹಣೆಯ ಮೇಲೆ ಮೂಗು ಬೆಳೆದ ಚೀನಾದವರು ಈಗ ಕೈ, ಕಾಲು ಎಲ್ಲವನ್ನೂ ಬಳಸಿಕೊಳ್ಳುತ್ತಿದ್ದಾರೆ.

ದಕ್ಷಿಣ ಆಫ್ರಿಕಾದ ನಾಯಕ ನೆಲ್ಸನ್ ಮಂಡೇಲಾ ನಿಧನರಾದಾಗ ಕೊಯಮತ್ತೂರಿನಲ್ಲಿ ವ್ಯಾಪಾರಿಯೊಬ್ಬರು ಅಂಗಡಿಯ ಗೋಡೆಯ ಮೇಲೆ ಅಂಟಿಸಿದ ಚಿತ್ರವಿದು. ಚಿತ್ರದ ಕೆಳಗೆ ಮಹಾನ್ ನಾಯಕನ ಗುಣಗಾನ ಮಾಡಿ ಸಂತಾಪ ಸೂಚಿಸಿದರು. ಆದರೆ ಈ ಚಿತ್ರ ನಟ ಮೋರ್ಗಾನ್ ಫ್ರೀಮನ್ ಅವರದ್ದು. 'ಇನ್‌ವಿಕ್ಟಸ್' ಚಿತ್ರದಲ್ಲಿ ಮಂಡೇಲಾ ಪಾತ್ರ ನಿರ್ವಹಿಸಿದ್ದರು. ಸಿನಿಮಾ ನಟರನ್ನು ಆರಾಧಿಸುವ ಭಾರತದಲ್ಲಿ ಇಂತಹ ತಪ್ಪುಗಳು ಆಗುವುದು ಸಹಜ ಬಿಡಿ.





ಕ್ರೀಡೆಯಲ್ಲಿ ಪದಕಗಳ ಮೇಲೆ ಪದಕಗಳನ್ನು ಬಾಚಿಕೊಳ್ಳುತ್ತಿರುವ ಚೀನಾದವರು ಚೆಂಡು- ದಾಂಡು ಆಟದಲ್ಲಿ ಮಾತ್ರ ಹಿಂದಿದ್ದರು. ಈಗ ಕ್ರಿಕೆಟ್‌ನಲ್ಲೂ ಪಾರುಪತ್ಯ ಮೆರೆಯಲು ಅಲ್ಲಿ ಮೈದಾನದಲ್ಲೇ ತರಬೇತಿ ನೀಡಲಾಗುತ್ತಿದೆಯಂತೆ. ಭಾರತದ ಹಾಗೆ ಹಾದಿ- ಬೀದಿಯಲ್ಲಿ ಆಡಿದರೆ ಈ ಆಟದಲ್ಲೂ ಸೆಡ್ಡು ಹೊಡೆಯಬಹುದು ಎಂಬ ಕಿವಿಮಾತನ್ನು ಇನ್ನೂ ಯಾರೂ ಹೇಳಿಲ್ಲವೇನೋ!